2 ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ
ಸಾಃ ಗೋಕಾಕ
ಸಿಸಿ ನಂಬರಃ 2692/2013

ನಾನು, ರೂಪಾ ಮಟ್ಟಿ
ಬಿ.ಎಸ್ ಸಿ., ಎಲ್‌ಎಲ್.ಎಮ್.,
2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ಗೋಕಾಕ.

ಆರೋಪಿತನ ಹೆಸರು :1) ಕುಮಾರ ಬಸನಗೌಡ ಪಾಟೀಲ,
ವಯಸ್ಸುಃ 26 ವರ್ಷ, ಉದ್ಯೋಗಃ ಒಕ್ಕಲುತನ,
ಸಾಃ ಅಕ್ಕತಂಗೇರಹಾಳ, ತಾಃ ಗೋಕಾಕ.

ನಿಮ್ಮ ಮೇಲೆ ಹೊರೆಸುವ ದೋಷಾರೋಪಣೆ ಏನೆಂದರೆ,

ದಿಃ 17-12-2012 ರಂದು ರಾತ್ರಿ 8-30 ಗಂಟೆಗೆ ಗೋಕಾಕ ತಾಲೂಕಿನ ಅಕ್ಕತಂಗೇರಹಾಳ-ನೇಸರಗಿ ಗ್ರಾಮಕ್ಕೆ ಹೋಗುವ ರಸ್ತೆಯ ಸರ್ಕಾರಿ ರಸ್ತೆಯ ಪಂಜಾನಟ್ಟಿ ಗ್ರಾಮದಲ್ಲಿ ಸರ್ಕಾರಿ ಶಾಲೆಯ ಮುಂಭಾಗದಲ್ಲಿ ಆರೋಪಿತನಾದ ನೀನು ಬೇಕಾಯ್ದೆಶೀರ ರೀತಿಯಿಂದ ಮತ್ತು ಅಕ್ರಮವಾಗಿ ಯಾವುದೇ ಲೈಸನ್ಸ ವ ಪರ್ಮಿಟ ಇಲ್ಲದೇ ನೀಲಿ ಬಣ್ಣದ ಬಜಾಜ ಕಂಪನಿಯ ಪಲ್ಸರ್ ದ್ವಿಚಕ್ರ ವಾಹನದ ಮೇಲೆ ಎರಡು ಬಿಳಿ ಬಣ್ಣದ ಪ್ಲಾಸ್ಟಿಕ ಗೊಬ್ಬರದ ಚೀಲದಲ್ಲಿ ಗೋವಾ ಮದ್ಯ ರಿಯಲ್ 7 ಎಕ್ಷ್ಟ್ರಾ ಸ್ಟ್ರಾಂಗ್ ವಿಸ್ಕಿ 90 ಎಂ ಎಲ್ ಸಾಮರ್ಥ್ಯದ 406 ಪ್ಲಾಸ್ಟಿಕ್ ಪಾಕೇಟುಗಳನ್ನು ಮಾರಾಟದ ಸಲುವಾಗಿ ಸಾಗಾಟ ಮಾಡುತ್ತಿದ್ದಾಗ ಸಿಕ್ಕುಬಿದ್ದು ಅಪರಾಧ ಕಲಂ 32(1) ಕೆ. ಇ. ಕಾಯ್ದೆ ಅಡಿ ಅಪರಾಧ ಮಾಡಿರುವಿ.

ಮೇಲೆ ಹೇಳಿದ ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತನಾದ ನೀನು ಬೇಕಾಯ್ದೆಶೀರವಾಗಿ ಮತ್ತು ಅಕ್ರಮವಾಗಿ ಬಿಳಿ ಬಣ್ಣದ ಪ್ಲಾಸ್ಟಿಕ ಗೊಬ್ಬರದ ಚೀಲದಲ್ಲಿ ಗೋವಾ ಮದ್ಯ ರಿಯಲ್ 7 ಎಕ್ಷ್ಟ್ರಾ ಸ್ಟ್ರಾಂಗ್ ವಿಸ್ಕಿ 90 ಎಂ ಎಲ್ ಸಾಮರ್ಥ್ಯದ 406 ಪ್ಲಾಸ್ಟಿಕ್ ಪಾಕೇಟುಗಳನ್ನು ಯಾವುದೇ ಲೈಸನ್ಸ ವ ಪರ್ಮಿಟ ಇಲ್ಲದೇ ಮಾರಾಟದ ಸಲುವಾಗಿ ದ್ವಿ-ಚಕ್ರ ವಾಹನದಲ್ಲಿಟ್ಟುಕೊಂಡು ಸಾಗಾಟ ಮಾಡುತ್ತಿರುವಾಗ ಸಿಕ್ಕುಬಿದ್ದು ಅಪರಾಧ ಕಲಂ 38(ಎ) ಕೆ. ಇ. ಕಾಯ್ದೆ ಅಡಿ ಅಪರಾಧ ಮಾಡಿರುವಿ.

ಮೇಲೆ ಹೇಳಿದ ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತನಾದ ನೀನು ಸದರಿ ಮದ್ಯವನ್ನು ಸೇವಿಸಿದರೆ ಅದು ಮನುಷ್ಯನ ಪ್ರಾಣಕ್ಕೆ ಹಾನಿಕರ ಅಂತಾ ಗೊತ್ತಿದ್ದರೂ, ಅಕ್ರಮವಾಗಿ ಗೋವಾ ಮದ್ಯ ರಿಯಲ್ 7 ಎಕ್ಷ್ಟ್ರಾ ಸ್ಟ್ರಾಂಗ್ ವಿಸ್ಕಿ 90 ಎಂ ಎಲ್ ಸಾಮರ್ಥ್ಯದ 406 ಪ್ಲಾಸ್ಟಿಕ್ ಪಾಕೇಟುಗಳನ್ನು ನಿನ್ನ ವಶದಲ್ಲಿ ಇಟ್ಟುಕೊಂಡು ಅಪರಾಧ ಕಲಂ 273 ಐಪಿಸಿ ಅಡಿ ಅಪರಾಧ ಮಾಡಿರುವಿ.

ಪ್ರಃ **1 :** ನಿನಗೆ ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ**?**

ಉ :

ಪ್ರಃ **2 :** ನೀನು ಗುನ್ನಾ ಕಬೂಲಿ ಆಗುವಿಯೋ ಅಥವಾ ವಿಚಾರಣಾ ಆಗಬೇಕೋ?

ಉ :

( ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವನಿಂದ ಬಂದ ಉತ್ತರಗಳನ್ನು ನನ್ನ ಸ್ವ ಅಕ್ಷರಗಳಲ್ಲಿ ಬರೆದುಕೊಂಡೆ ಅಂತಾ ದೃಢೀಕರಿಸುತ್ತೇನೆ)

ಸಹಿ/-

ದಿಃ 21-03-2022 2 ನೇ ಹೆಚ್ಚುವರಿ ದಿ.ನ್ಯಾದಂ., ಗೋಕಾಕ.